# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೨೩೫೮೪, ೨೬೬೧೨೯೯೧   ಫ್ಯಾಕ್ಸ್ : ೨೬೫೭೨೯೯೬
http://www.kasapa.in   e-mail : kannadaparishattu@gmail.com


ಕ್ರಮಸಂಖ್ಯೆ : ಕಸಾಪ / ಪ್ರಕಟಣೆ / ೨೦೨೧–೨೨ ದಿನಾಂಕ : ೧೭–೦೫–೨೦೨೨

ಇವರಿಗೆ

ಸಂಪಾದಕರು / ಮುಖ್ಯ ವರದಿಗಾರರು
.........................................ಬೆಂಗಳೂರು

ಮಾನ್ಯರೆ,

**ಪ್ರಕಟಣೆ ಕೃಪೆಗಾಗಿ**

## ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳಿಗೆ ಆಮೂಲಾಗ್ರ ತಿದ್ದುಪಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಉದ್ದೇಶ ಹಾಗೂ ಸ್ವರೂಪಕ್ಕೆ ಧಕ್ಕೆ ಬರದಂತೆ ನಿಬಂಧನೆಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಅವಶ್ಯಕತೆ ಇದ್ದಕಡೆ ಕೆಲವು ಬದಲಾವಣೆ ಮಾಡಲಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಅರಳಿ ನಾಗರಾಜ್ ಅವರು ತಿಳಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉದ್ದೇಶಿತ ನಿಬಂಧನೆಗಳ ತಿದ್ದುಪಡಿಯ ಅಂತಿಮ ಪ್ರತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ ಅವರಿಗೆ ಸಲ್ಲಿಸಿದರು.

ಈಗಾಗಲೇ ಸಾಹಿತ್ಯ ಪರಿಷತ್ತಿನ ನಿಬಂಧನೆಗಳ ಕಾಲಕಾಲಕ್ಕೆ **ತಿದ್ದುಪಡಿ** ಮಾಡಲಾಗಿದ್ದು, ಪರಿಷತ್ತಿನ ವಿವಿಧ ಘಟಕಗಳ ಅಧ್ಯಕ್ಷರುಗಳ ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವು ಬದಲಾವಣೆಗಳು ಆಗಬೇಕಾಗಿದ್ದರಿಂದ ಮೂಲ ಧ್ಯೇಯೋದ್ದೇಶಕ್ಕೆ ಹಾಗೂ ನಿಬಂಧನೆಗಳನ್ನು ಕೂಲಂಕಷವಾಗಿ ಪರಿಗಣಿಸಿ ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಅವುಗಳ ತಿದ್ದುಪಡಿ ಮಾಡಲಾಗಿದೆ ಎಂದರು.

ಪರಿಷ್ಕೃತ ಕರಡು ಪ್ರತಿಯನ್ನು ಸ್ವೀಕರಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಅವರು ಪರಿಷತ್ತಿನ ಮೂಲ ಉದ್ದೇಶ ಹಾಗೂ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆ ಬರದಂತೆ ಸಮಿತಿ ಸದಸ್ಯರು ನಿಬಂಧನೆಯಲ್ಲಿ ಇರುವ ನ್ಯೂನ್ಯತೆಗಳನ್ನು ಸರಿಪಡಿಸಲು ಸಾಕಷ್ಟು ಆರೋಗ್ಯಪೂರ್ಣ ಚರ್ಚೆಗಳನ್ನು ನಡೆಸಿ, ಸೂಕ್ತವಾದ ತಿದ್ದುಪಡಿಗಳನ್ನು ಸೇರಿಸಿದ್ದಾರೆ. **ನಮ್ಮ ಮೂಲ ಉದ್ದೇಶ ಕನ್ನಡ ಸಾಹಿತ್ಯ ಪರಿಷತ್ತನ್ನು ಜನ ಸಾಮಾನ್ಯರ ಪರಿಷತ್ತನ್ನಾಗಿಸಬೇಕು** ಎನ್ನುವ ಉದ್ದೇಶವಾಗಿದೆ. ಪ್ರಸ್ತುತ ತಿದ್ದುಪಡಿ ಪ್ರತಿಯನ್ನು ವಿಶೇಷ ಸರ್ವ ಸದ್ಯರ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದರು.

ಕಳೆದ ಮೂರೂವರೆ ತಿಂಗಳಿನಿಂದ ೧೦ಕ್ಕೂ ಹೆಚ್ಚು ಬಾರಿ ಸಭೆ ಸೇರಿ ನಿಬಂಧನೆಯನ್ನು ಅಕ್ಷರಶಃ ಪರಿಶೀಲಿಸಿ ತಿದ್ದುಪಡಿ ಮಾಡಿದ್ದಾರೆ. ನ್ಯಾಯಮೂರ್ತಿ **ಅರಳಿ ನಾಗರಾಜ** ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸಮಿತಿಯಲ್ಲಿ ವಿಶ್ರಾಂತ ನ್ಯಾಯಾಧೀಶರಾದ **ಶಿವಲಿಂಗೇಗೌಡ,** ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ಚುನಾವಣಾಧಿಕಾರಿಗಳಾದ **ಜಿ.ಎಂ. ಗಂಗಾಧರಸ್ವಾಮಿ,** ಕೇಂದ್ರ ವಿಶೇಷ ಚುನಾವಣಾಧಿಕಾರಿಗಳಾದ **ಎಸ್.ಟಿ. ಮೋಹನ್‌ರಾಜು,** ಮಂಡ್ಯ ಜಿಲ್ಲೆಯ ಮಾಜಿ ಅಧ್ಯಕ್ಷರಾದ **ಮುದ್ದೇಗೌಡ,** ಸಹಕಾರ ಸಂಘಗಳ ನಿಬಂಧಕರಾದ **(ನಿವೃತ್ತ) ಅಶ್ವತ್ಥಯ್ಯ,** ಕಸಾಪ ಗ್ರಂಥಭಂಡಾರ ಸಲಹಾ ಸಮಿತಿ ಮಾಜಿ ಸದಸ್ಯರಾದ **ಪಂಪಯ್ಯ ಸ್ವಾಮಿ ಸಾಲಿಮಠ,** ವಕೀಲರಾದ ಸಿ.ವಿ. **ಸುಧೀಂದ್ರ,** ಧಾರವಾಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ಡಾ. ಲಿಂಗರಾಜ ಅಂಗಡಿ,** ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ **ರವಿಕುಮಾರ ಚಾಮಲಾಪುರ,** ಸಹಕಾರ ತಜ್ಞರಾದ **ಆರ್.ಪಿ. ರವಿಶಂಕರ್** , ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ **ನೇ.ಭ. ರಾಮಲಿಂಗಶೆಟ್ಟಿ** ಹಾಗೂ ಗೌರವ ಕೋಶಾಧ್ಯಕ್ಷರಾದ **ಬಿ.ಎಂ. ಪಟೇಲ್ ಪಾಂಡು** ಅವರುಗಳು ಉಪಸ್ಥಿತರಿದ್ದರು.

**ಭಾವಚಿತ್ರ : ಕಸಾಪ ನಿಬಂಧನೆಯ ಉದ್ದೇಶಿತ ತಿದ್ದುಪಡಿಯ ಅಂತಿಮ ಕರಡು ಪ್ರತಿ ಹಸ್ತಾಂತರ**

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು

ದಯವಿಟ್ಟು ಇದನ್ನು ರಾಜ್ಯಮಟ್ಟದ ಸುದ್ದಿಯಾಗಿ ಪ್ರಕಟಿಸಲು ಕೋರಿದೆ.